**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 69/2019**

**ಪಿ ಡಬ್ಲ್ಯೂ/1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 03/04/2024.**

**ಪಾಟೀ ಸವಾಲುಃ ಶ್ರೀ ಎ ವಿ ಕೆ ವಕೀಲರಿಂದ 1 ರಿಂದ 12 ನೇ ಪ್ರತಿವಾದಿಗಳ ವಕೀಲರುಃ**

1. ಈ ದಾವೆಯನ್ನು ನಾನು ಸಿದ್ದಪ್ಪ ಮತ್ತು ಅವರ ಮಕ್ಕಳು, ಗಂಗವ್ವ ಹನಮವ್ವ, ನನ್ನ ಕಾಕಾ ಫಕ್ಕೀರಪ್ಪ, ನನ್ನ ತಂಗಿ ಮಲ್ಲವ್ವ ಇವರ ವಿರುದ್ಧ ದಾಖಲಿಸಿರುತ್ತೇನೆ. ಈ ದಾವೆಯನ್ನು ನಾನು ಹೊಲದ ಮೇಲೆ ಹಾಕಿರುತ್ತೇನೆ. ನನಗೆ ಹೊಲದ ಸರ್ವೇ ನಂಬರ, ಚಕ್ಕುಬಂದಿ ಹಾಗು ಕ್ಷೇತ್ರ ಗೊತ್ತಿಲ್ಲ. ನಮ್ಮ ಮನೆತನದ ಮೂಲ ಪುರುಷ ಕೆಂಚಪ್ಪ, ಅವರಿಗೆ ನಾಲ್ಕು ಜನ ಗಂಡು ಮಕ್ಕಳು ಹಾಗೂ ಐದು ಜನ ಹೆಣ್ಣು ಮಕ್ಕಳು ಇರುತ್ತಾರೆ.

2. ನಮ್ಮ ಮನೆತನದ ಮೂಲ ಪುರುಷ ತಿಪ್ಪಣ್ಣ ಎಂದರೆ ಸರಿ. ಸದರಿ ತಿಪ್ಪಣ್ಣ ಇವರಿಗೆ ನಾಲ್ಕು ಗಂಡು ಮಕ್ಕಳು ಹಾಗೂ ಐದು ಜನ ಹೆಣ್ಣು ಮಕ್ಕಳು ಎಂದರೆ ಸರಿ. ಐದು ಹೆಣ್ಣು

ಮಕ್ಕಳ ಹೆಸರು ಯಲ್ಲಮ್ಮ, ಸಿದ್ದಮ್ಮ, ನಾಗಮ್ಮ, ಗಂಗಮ್ಮ ಹಾಗೂ ಭರಮವ್ವ ಆಗಿರುತ್ತದೆ. ಇವರೆಲ್ಲರೂ ತೀರಿಕೊಂಡಿರುತ್ತಾರೆ. ಈ ಐದು ಜನ ಹೆಣ್ಣು ಮಕ್ಕಳ ಗಂಡಂದಿರು ಸಹ ಈಗ ತೀರಿಕೊಂಡಿರುತ್ತಾರೆ, ಅವರ ಮಕ್ಕಳು ಇರುತ್ತಾರೆ. ಅವರ ಮಕ್ಕಳ ಪೈಕಿ ಕೆಲವೊಂದು ಮಕ್ಕಳು ತೀರಿಕೊಂಡಿರುತ್ತಾರೆ. ಈ ರೀತಿ ತೀರಿಕೊಂಡ ಮಕ್ಕಳು ವಾರಸುದಾರರು ಇರುತ್ತಾರೆ.

3. ತಿಪ್ಪಣ್ಣಗೆ ನಾಲ್ಕು ಜನ ಗಂಡು ಮಕ್ಕಳು, ಅದರಲ್ಲಿ ನಿಂಗಪ್ಪ ಈಗ ಕಾಲ ಆಗಿದ್ದು, ಅವರಿಗೆ ಇಬ್ಬರು ಮಕ್ಕಳು, ಅವರು ಹನಮವ್ವ ಮತ್ತು ಗಂಗವ್ವ. ಸದರಿ ಹನಮವ್ವ ತೀರಿಕೊಂಡಿದ್ದು, ಗಂಗವ್ವ ಇದ್ದಾರೆ. ತೀರಿಕೊಂಡ ಹನಮವ್ವಳಿಗೆ ಮೂರು ಹೆಣ್ಣು ಮಕ್ಕಳು ಹಾಗೂ ಮೂರು ಜನ ಗಂಡು ಮಕ್ಕಳು ಇರುತ್ತಾರೆ. ಅವರ ಹೆಸರು ಗದಿಗೆವ್ವ, ರೇಣವ್ವ ಹಾಗೂ ಇನ್ನೊಬ್ಬರು ನೆನೆಪು ಇರುವುದಿಲ್ಲ. ಹನಮವ್ವನ ಗಂಡು ಮಕ್ಕಳು ಹೆಸರು ಸಿದ್ದಪ್ಪ, ಸೋಮಣ್ಣ ಹಾಗೂ ಇನ್ನೊಬ್ಬರ ಹೆಸರು ಲಕ್ಷ್ಯಕ್ಕೆ ಇರುವುದಿಲ್ಲ. ಹನಮವ್ವಳ ಮಕ್ಕಳು ಸಹ ಈ ದಾವಾದ ಅವಶ್ಯಕ ಪಕ್ಷಗಾರರು ಎಂದರೆ ಸರಿ.

4. ತಿಪ್ಪಣ್ಣ 2 ನೇ ಮಗ ಫಕ್ಕೀರಪ್ಪ ಈಗ ತೀರಿಕೊಂಡಿರುತ್ತಾರೆ. ಫಕ್ಕೀರಪ್ಪನಿಗೆ ಎರಡು ಜನ ಮಕ್ಕಳು, ಅವರ ಹೆಸರು ತಿಪ್ಪಣ್ಣ ಮತ್ತು ಮಲ್ಲವ್ವ, ತಿಪ್ಪಣ್ಣ ತೀರಿಕೊಂಡಿದ್ದು, ಮಲ್ಲವ್ವ ಇರುತ್ತಾರೆ. ತಿಪ್ಪಣ್ಣ ಲಗ್ನವಾಗದೇ ತೀರಿಕೊಂಡಿರುತ್ತಾರೆ. ಈ ರೀತಿ ತಿಪ್ಪಣ್ಣ ಲಗ್ನ ಆಗದೇ ತೀರಿಕೊಂಡಿರುವಬಗ್ಗೆ ನ್ಯಾಯಾಲಯಕ್ಕೆ ಏನಾದರು ವಾರಸು ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

5. ತಿಪ್ಪಣ್ಣ ಮೂರನೇ ಮಗ ಸಿದ್ದಪ್ಪ. ಸದರಿ ಸಿದ್ದಪ್ಪ ಈಗ ಜೀವಂತವಿದ್ದು, ಅವರಿಗೆ ಒಬ್ಬ ಹೆಣ್ಣು ಮಗಳು ಹಾಗೂ ಒಬ್ಬ ಗಂಡು ಮಗ ಇರುತ್ತಾರೆ. ಅವರ ಹೆಸರು ಲಕ್ಷ್ಯಕ್ಕೆ ಇರುವುದಿಲ್ಲ.

6. ತಿಪ್ಪಣ್ಣನ ನಾಲ್ಕನೇ ಮಗ ಕೆಂಚಪ್ಪ, ಈಗ ತೀರಿಕೊಂಡಿರುತ್ತಾರೆ. ಕೆಂಚಪ್ಪನಿಗೆ ಮೂರು ಜನ ಮಕ್ಕಳು, ರಾಮಣ್ಣ, ದ್ಯಾಮಣ್ಣ ಹಾಗೂ ತಿಪ್ಪಣ್ಣ ಎಂದು ಇರುತ್ತದೆ, ಅವರಿಗೆ ಹೆಣ್ಣು ಮಕ್ಕಳು ಇರುವುದಿಲ್ಲ. ತಿಪ್ಪಣ್ಣ ನನ್ನ ಕಾಕಾ ಆದ ಸಿದ್ದಪ್ಪ ಇವರಿಗೆ ದತ್ತಕ್ಕೆ ಹೋಗಿರುತ್ತಾರೆ. ಈ ರೀತಿ ತಿಪ್ಪಣ್ಣ ದತ್ತಕ್ಕೆ ಹೋಗಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈ ರೀತಿ ತಿಪ್ಪಣ್ಣ ದತ್ತಕಕ್ಕೆ ಹೋಗಿದ್ದಾನೆ ಅಂತ ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

7. ದಾವಾ ಆಸ್ತಿಗಳನ್ನು 1973 ರಲ್ಲಿಯೇ ವಿಭಾಗ ಮಾಡಿಕೊಂಡು ಆ ಪ್ರಕಾರ ನಮ್ಮ

ಭಾಗಕ್ಕೆ ಬಂದಂತಹ ಜಮೀನುಗಳ ಪ್ರತ್ಯೇಕ ಸಾಗುವಳಿ ಮಾಡುತ್ತಾ ಬರುತಿದ್ದೇವೆ ಎಂದರೆ ಸರಿ.

8. ನಾನು ನನ್ನ ಸಹೋದರರ ತಿಪ್ಪಣ್ಣ ಸಿದ್ದಪ್ಪನಿಗೆ ದತ್ತಕಕ್ಕೆ ಹೋಗಿರುವ ಬಗ್ಗೆ ಹೇಳಿದ್ದು, ಅವರಿಗೆ ಒಬ್ಬ ಸಿದ್ದಪ್ಪ ಅಂತ ಮಗ ಇದ್ದಾನೆ ಎಂದರೆ ಸರಿ. ಸದರಿ ಸಿದ್ದಪ್ಪ ಸಹ ಈ ದಾವೆಗೆ ಅವಶ್ಯಕ ಪಕ್ಷಗಾರರ ಎಂದರೆ ಸರಿ. ದಾವಾ ಜಮೀನಿನಲ್ಲಿ ಸಹ ಸಿದ್ದಪ್ಪನಿಗೆ ಹಿಸ್ಸೆ ಇದೆ ಎಂದರೆ ಸರಿಯಲ್ಲ. ನಾನು ಸದರಿ ಸಿದ್ದಪ್ಪನಿಗೆ ಬೇರೆ ಜಮೀನು ಇದೆ ಅಂತ ಹೇಳಿದ್ದು, ಈ ರೀತಿ ಇರುವ ಬೇರೆ ಜಮೀನಿನ ಸರ್ವೇ ನಂಬರ ಹೇಳಲು ಆಗುತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಸಿದ್ದಪ್ಪನಿಗೂ ದಾವಾ ಆಸ್ತಿಯಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಿದ್ದಪ್ಪನ ಮನೆ ಹಾಗೂ ಹಿಸ್ಸಾ ಬೇರೆ ಇರುತ್ತದೆ ಎಂದು ನುಡಿಯುತ್ತಾರೆ.

9. ನನ್ನದು ಸಿಗ್ಗಾಂವ ತಾಲೂಕಿನ ಅತ್ತಿಗೇರಿ ಗ್ರಾಮ ಎಂದರೆ ಸರಿ. ಸದರಿ ಗ್ರಾಮದಲ್ಲಿ ನಮಗೆ ಸೇರಿದ ವಾಟ್ನಿ ಆದ ಮನೆಗಳು ಇವೆ ಎಂದರೆ ಸರಿ. ಸದರಿ ಮನೆಗಳ ನಂಬರ ಹೇಳಲಾಗುತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮನೆಗಳನ್ನು 1973 ರಲ್ಲಿ ವಾಟ್ನಿ ಮಾಡಿಕೊಂಡಿರುತ್ತೇವೆ. ದಾವಾಆಸ್ತಿಗಳನ್ನು ದಿಃ22.05.1973 ರಲ್ಲಿ ವಾಟ್ನಿ ಮಾಡಿಕೊಂಡಿರುವ ಬಗ್ಗೆ ಹೇಳಿದ್ದು, ಆ ಪ್ರಕಾರ ನಾನು ದಾವಾ ಆಸ್ತಿಗಳ ಪ್ರತ್ಯೇಕ ಸಾಗುವಳಿ ಮಾಡುತಿದ್ದೇನೆ ಎಂದರೆ ಸರಿ.

10. 1973 ರಲ್ಲಿ ಆದ ವಿಭಾಗದ ಪ್ರಕಾರ ಫಕ್ಕೀರಪ್ಪ ಇವರಿಗೆ ಸ.ನಂಃ5/3 ಎ ಕ್ಷೇತ್ರ 5 ಎಕರೆ 3 ಗುಂಟೆ ಬಂದಿರುತ್ತದೆ ಎಂದರೆ ಸರಿ. ಅದೇ ರೀತಿ ನಾನು ತಿಪ್ಪಣ್ಣ ಇವರು ದತ್ತಕಕ್ಕೆ ಹೋಗಿದ್ದು ಅಂತ ಹೇಳಿದ್ದು, ಅವರಿಗೆ ಸದರಿ ವಿಭಾಗದ ಪ್ರಕಾರ ಸ.ನಂಃ503/ಬಿ 3 ಎಕರೆ 5 ಗುಂಟೆ ಬಂದಿರುತ್ತದೆ ಎಂದರೆ ಸರಿ. ನನ್ನ ತಂದೆ ಕೆಂಚಪ್ಪ ಇವರಿಗೆ ಸ.ನಂಃ5/3 ಸಿ ಕ್ಷೇತ್ರ 3 ಎಕರೆ 5 ಗುಂಟೆ ಬಂದಿರುತ್ತದೆ ಎಂದರೆ ಸರಿ. ಈ ರೀತಿ ವಾಟ್ನಿ 1973 ರಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

11. ನಿಂಗಪ್ಪ ತಿಪ್ಪಣ್ಣ ಹಿಮ್ಮಡಿ ಇವರಿಗೆ ರಿ.ಸ.ನಂಃ5/3 ಡಿ ರಲ್ಲಿ ಕ್ಷೇತ್ರ 3 ಎಕರೆ 4 ಗುಂಟೆ ಬಂದಿದೆ ಎಂದರೆ ಸರಿ. ಸ.ನಂಃ46/1 ರಲ್ಲಿ ಫಕ್ಕೀರಪ್ಪ, ನಿಂಗಪ್ಪ, ಕೆಂಚಪ್ಪ ಹಾಗೂ ತಿಪ್ಪಣ್ಣ ಇವರಿಗೆ ಸಾಮೂಹಿಕ ಹಿಸ್ಸಾ ನೀಡಲಾಗಿದೆ ಎಂದರೆ ಸರಿ. ಈ ರೀತಿ ವಾಟ್ನಿ ಪ್ರಕಾರ ಕಂದಾಯ ಇಲಾಖೆಯಿಂದ ಡ.ನಂಃ932 ದಿಃ29.06.1973 ರಂದು ಮಂಜೂರಾಗಿದೆ

ಎಂದರೆ ಸರಿ.

(ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**